ಜೆಎಸ್ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 29-08-2018

**ವರದಿ**

**ಲೋಕಸೇವೆಗೆಂದೇ ಉದಯಿಸಿದ ಸೇವಾ ಸೂರ್ಯನಂತೆ ಸೇವೆಗೈದವರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ – ಪ್ರಾಚಾರ್ಯ ಪ್ರೊ. ಉಮೇಶ**

**ಜೆಎಸ್ಎಸ್‌ನಲ್ಲಿ ರಾಜೇಂದ್ರ ಶ್ರೀಗಳವರ ಸ್ಮರಣೆ**

ಕೊಳ್ಳೇಗಾಲ : 29 ಆಗಸ್ಟ್ : ಲೋಕ ಸೇವೆ ಮಾಡಲೆಂದೇ ಉದಯಿಸಿದ ಸೇವಾ ಸೂರ್ಯನಂತೆ ಜಗದ ಬೆಳಕಾಗಿ ಸೇವೆ ಮಾಡಿದ ಕಾಯಕಯೋಗಿ ಜಗವಂದಿತ ಶಿಕ್ಷಣದ ಶ್ರೀ ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಎಂದು ಮಹಿಳಾ ಕಾಲೇಜಿನ ಪ್ರಾಚಾರ್ಯ ಪ್ರೊ. ಉಮೇಶ ತಿಳಿಸಿದರು.

ಇಲ್ಲಿನ ಜೆಎಸ್ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಅಂಗವಾಗಿ ಶ್ರೀಗಳವರನ್ನು ಕುರಿತು ಮಾತನಾಡಿದರು.

ಸಾವಿರಾರು ಬಡಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ, ವಸತಿ ಕಲ್ಪಿಸಿ ವಿದ್ಯೆಯಿಂದ ವಂಚಿತರಾಗಿ ಉಳಿಯುತ್ತಿದ್ದ ಲಕ್ಷಾಂತರ ವಿದ್ಯಾರ್ಥಿಗಳನ್ನು ಪೂರ್ಣ ವಿದ್ಯಾವಂತರನ್ನಾಗಿ ಮಾಡಿದರು. ತಮ್ಮ ಚಿಕಿತ್ಸದ ಗುಣ, ಸೌಜನ್ಯ, ಸರಳತೆ ಮತ್ತು ಸಮಾಜಮುಖಿ ಚಿಂತನೆಗಳಿಂದಲೇ ಇಡೀ ನಾಡಿನ ಹೃನ್ಮನವನ್ನು ಗೆದ್ದವರು. ಸುತ್ತೂರು ವೀರ ಸಿಂಹಾಸನ ಮಠಕ್ಕೆ ಬಹುಮುಖಿ ಆಯಾಮ ನೀಡಿದವರು. ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಶ್ರೀಗಳು ಸ್ಥಾಪಿಸಿದ ಒಂದು ಸಣ್ಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ವಿಶ್ವವಿಖ್ಯಾತ ಜೆಎಸ್ಎಸ್ ವಿದ್ಯಾಸಂಸ್ಥೆಯಾಗಿ ರೂಪುಗೊಂಡಿರುವುದು ಒಂದು ಪವಾಡವೇ ಸರಿ ಎಂದು ತಿಳಿಸಿದರು.

ಉತ್ತಮ ಸಮಾಜ ನಿರ್ಮಾಣಕ್ಕೆ ಅವಿರತವಾಗಿ ಶ್ರಮಿಸಿದವರು ಪೂಜ್ಯ ಶ್ರೀಗಳವರು. ಅನ್ನದಾಸೋಹದ ಜತೆಗೆ ಕಲೆ, ಸಾಹಿತ್ಯ, ಸಂಸ್ಕೃತಿ, ವೈಚಾರಿಕತೆಗಳೂ ಇದ್ದಾಗ ಮಾತ್ರ ಸಮಗ್ರ ವ್ಯಕ್ತಿತ್ವ ರೂಪುಗೊಳ್ಳಲು ಸಾಧ್ಯ ಎಂಬುದನ್ನು ಅರಿತಿದ್ದ ಶ್ರೀಗಳು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಶಿವರಾತ್ರೀಶ್ವರ ಧಾರ್ಮಿಕ ಧತ್ತಿ ಸೇರಿದಂತೆ ಅನೇಕ ಸೇವಾ ಸಂಸ್ಥೆಗಳನ್ನು ಸಹ ಸ್ಥಾಪಿಸಿದವರಾಗಿದದಾರೆ.

ವಿದ್ಯಾಪೀಠದ ಸಲಹೆಯಂತೆ ಈ ವರ್ಷ ಆಯೋಜಿಸಬೇಕಾಗಿದ್ದ ಜಯಂತಿ ಮಹೋತ್ಸವದ ಹಣವನ್ನು ಸಮುಚ್ಚಯದ ನೌಕರರ ಒಂದು ದಿನದ ವೇತನ ಹಾಗೂ ಸ್ವಇಚ್ಛೆಯಿಂದ ನೀಡುವ ವಿದ್ಯಾರ್ಥಿಗಳ ವಂತಿಕೆಯ ಜೊತೆ ಕೊಡಗು ನೆರೆಹಾವಳಿ ಸಂತ್ರಸ್ತರ ಸಹಾಯಕ್ಕಾಗಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ನೀಡುವುದಾಗಿ ತಿಳಿಸಿದರು.

ನರ್ಸಿಂಗ್‌ಶಾಲೆ ಪ್ರಾಚಾರ್ಯ ಶ್ರೀ ಡಿ. ಜಿ ವಿಷಕಂಠಮೂರ್ತಿ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ಹಾಗೂ ಎಲ್ಲಾ ನೌಕರರು ಮತ್ತು ವಿದ್ಯಾರ್ಥಿಗಳು ಸಮಾರಂಭದಲ್ಲಿ ಹಾಜರಿದ್ದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಅಂಗವಾಗಿ ಶ್ರೀಗಳವರನ್ನು ಕುರಿತು ಪ್ರಾಚಾರ್ಯ ಪ್ರೊ. ಉಮೇಶ ರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಸಮುಚ್ಚಯದ ಎಲ್ಲಾ ನೌಕರ ವರ್ಗದವರನ್ನು ಕಾಣಬಹುದು.





ಕಾರ್ಯಕ್ರಮದಲ್ಲಿ ಭಾಗವಹಿಸಿರುವ ವಿದ್ಯಾರ್ಥಿನಿಯರು

